**ಎರಡನೇ ಅಪರ ಸಿವಿಲ್ ನ್ಯಾಯಾಲಯ ಮತ್ತು**
**ಜೆ.ಎಂ.ಎಫ್.ಸಿ. ಕನಕಪುರ.**

CC No.570/2014

CW- 21 PW -7

| | | |
|---|---|---|
| ಹೆಸರು | ಃ | ಶ್ರೀನಿವಾಸ |
| ತಂದೆಯ ಹೆಸರು | ಃ | ಕುಳ್ಳಮಾರೇಗೌಡ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ | ಃ | ತಿಗಳರಹಳ್ಳಿ |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃ ದಿನಾಂಕ 25.06.2024

(ಗೈರು ಹಾಜರಾದ ಆರೋಪಿ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ). ಆರೋಪಿ ನಮ್ಮ ಊರಿನವರು. ಚಾಸಾ-1 ರಿಂದ 20, 22 ರಿಂದ 46 ಗೊತ್ತು.

ಆರೋಪಿಯು ತಿಗಳರಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಹಂಗಾಮಿ ಕಾರ್ಯದರ್ಶಿಯಾಗಿದ್ದು ಡೈರಿಗೆ ಹಾಲನ್ನು ಪೂರೈಕೆ ಮಾಡುವ ಷೇರುದಾರರಾದ ನಮ್ಮ ಹಣವನ್ನು ನಮಗೆ ನೀಡದೆ ಅವರು ಹಣವನ್ನು ದುರುಪಯೋಗ ಮಾಡಿರುವುದಿಲ್ಲ ಈ ಸಂಬಂಧ ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಅನುಮತಿಸಲಾಯಿತು).

ಪಾಟೀ ಸವಾಲು ಃ ಎಪಿಪಿ ಯವರಿಂದ ಃ

ದಿನಾಂಕಃ 16.12.2011 ರಿಂದ 31.12.2011 ರವರೆಗೆ ಮತ್ತು ದಿನಾಂಕ 01.01.2012 ರಿಂದ 15.01.2012 ರವರೆಗೆ ನಾನು ಹಾಕಿದ ಹಾಲಿಗೆ ಆರೋಪಿ 2,600/- ರೂ. ಹಣವನ್ನು ವಿತರಣೆ ಮಾಡಿರಲಿಲ್ಲ ಎಂದರೆ ಸರಿಯಲ್ಲ.  ಮತ್ತು ನಮ್ಮ ಗ್ರಾಮದ ಹಾಲಿನ ಡೈರಿಯ ಷೇರು ದಾರರು ಹಾಲಿನ ಹಣವನ್ನು ವಿತರಣೆ ಮಾಡಿರಲಿಲ್ಲ ಎಂದರೆ ಸರಿಯಲ್ಲ.

ಈ ವಿಚಾರವನ್ನು ಅಧ್ಯಕ್ಷರು ಮತ್ತು ಕಾರ್ಯ ಕಾರಿ ಸದಸ್ಯರುಗಳ ಸಭೆಯಲ್ಲಿ ಕೇಳಲಾಗಿ ಆ ಹಣವನ್ನು ಡೈರಿ ಅಕೌಂಟ್ ನಲ್ಲಿ ಬ್ಯಾಂಕಿನಿಂದ ಪಡೆದುಕೊಂಡಿದ್ದು ಕಾರಣಾಂತರದಿಂದ ಸ್ವಂತಕ್ಕೆ ಬಳಕೆ ಮಾಡಿಕೊಂಡಿದ್ದಾಗ್ಯೂ ವಿತರಣೆ ಮಾಡಲು ಕಾಲಾವಕಾಶ ಕೋರಿದ್ದರ ಮೇರೆಗೆ ಅದಕ್ಕೆ ನಾ ವೆಲ್ಲರೂ ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ಆರೋಪಿಯು ಹಣವನ್ನು ನಮಗೆ ಪಾವತಿ ಮಾಡಲಿಲ್ಲ ಎಂದರೆ ಸರಿಯಲ್ಲ.

ಹಾಲು ಉತ್ಪಾದಕರ ಸಹಕಾರ ಸಂಘದ ಹಣವನ್ನು ಚೆಕ್ ಮುಖಾಂತರ ಬಿಡಿಸಿಸಿ ಬ್ಯಾಂಕಿನಲ್ಲಿ ನಗದೀಕರಿಸಿ ಷೇರುದಾರರಿಗೆ ವಿತರಣೆ ಮಾಡದೇ ಸ್ವಂತಕ್ಕೆ ಉಪಯೋಗಿಸಿಕೊಂಡು ಸಹಕಾರ ಸಂಘದ ಹಣವನ್ನು ದುರುಪಯೋಗ ಮಾಡಿಕೊಂಡು ವಂಚನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿ ನಿರಾಕರಿಸಿದ ಹೇಳಿಕೆ ಭಾಗವನ್ನು ನಿಪಿ-10 ಎಂದು ಗುರುತಿಸಲಾಯಿತು. ಆರೋಪಿಯ ಜೊತೆ ರಾಜಿ ಮಾಡಿಕೊಂಡು ಆರೋಪಿಗೆ ಸಹಾಯ ಮಾಡಲು ಅವರ ಹೇಳಿಕೆ ಮೇರೆಗೆ ಸುಳ್ಳು

ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಇಲ್ಲ.

ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಕನಕಪುರ**